# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ**

**(ವಿಧಾನಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 824**
**ಉತ್ತರಿಸಬೇಕಾದ ದಿನಾಂಕ : 23.07.2024**
**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟದ 2023ರ ಸೆಪ್ಟೆಂಬರ್‌ನಲ್ಲಿ ನಡೆದ ನೇಮಕಾತಿಗೆ ಸಂಬಂಧಿಸಿದಂತೆ ಹುದ್ದೆಗಳ ವಿವರ, ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ವಿವರ, ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ವಿವರ, ಅಭ್ಯರ್ಥಿಗಳು ಗಳಿಸಿದ ಅಂಕಗಳ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳ ವಿವರಗಳನ್ನು ಪ್ರಕಟಿಸಿರುವುದು ನಿಜವೇ; (ಪ್ರಕಟಿಸಿದ್ದಲ್ಲಿ, ಎಲ್ಲಾ ವಿವರಗಳ ಮಾಹಿತಿ ನೀಡುವುದು) | ಹೌದು.<br><br>ಒಕ್ಕೂಟಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವೃಂದಬಲದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಒಕ್ಕೂಟದ ಅನುಮೋದಿತ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗಾಗಿ ಸರ್ಕಾರ ಅನುಮೋದನೆ ನೀಡಿದ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 2023ರ ಮಾಹೆಯಲ್ಲಿ ನಡೆದ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕಟಣೆ (ಹುದ್ದೆಗಳ ವಿವರ, ರೋಸ್ಟರ್, ವಿದ್ಯಾರ್ಹತೆ, ಶುಲ್ಕ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಇತ್ಯಾದಿ ವಿವರಗಳು), ಲಿಖಿತ ಪರೀಕ್ಷಾ ದಿನಾಂಕದ ಮಾಹಿತಿ, ಲಿಖಿತ ಪರೀಕ್ಷೆಯ ನಂತರ Key Answers ಗಳಿಗೆ ಆಕ್ಷೇಪಣೆಗಳಿಗೆ ಅವಕಾಶ, ಲಿಖಿತ ಪರೀಕ್ಷೆಯ ಫಲಿತಾಂಶ, ಸಂದರ್ಶನ ದಿನಾಂಕ ಮತ್ತು ಸಮಯ ಪ್ರಕಟಿಸಲಾಗಿರುತ್ತದೆ. |
| ಆ | ಸದರಿ ನೇಮಕಾತಿಯಲ್ಲಿ ನಡೆದಿರುವ ಅಕ್ರಮ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು: ಜಾರಿ ನಿರ್ದೇಶನಾಲಯದ ವರದಿ ಮತ್ತು ಅವರು ಒದಗಿಸಿರುವ ಸಾಕ್ಷಿಗಳ ಆಧಾರದ ಮೇಲೆ ಅಕ್ರಮ ನೇಮಕಾತಿಯಲ್ಲಿ ಭಾಗಿಯಾದ ಅದಿಕಾರಿಗಳು ಮತ್ತು ಇತರೆ ತಪ್ಪಿತಸ್ಥರ ಮೇಲೆ ದೂರು ದಾಖಲಿಸಿ ಕ್ರಮ ವಹಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಕಾರಣವೇನು; (ಸಂಪೂರ್ಣ ಮಾಹಿತಿ ನೀಡುವುದು) | ಜಾರಿ ನಿರ್ದೇಶನಾಲಯದ ದಾಳಿಯ ನಂತರ Prevention of Money Laundering Act 2002, U/s 66 (2) ರಲ್ಲಿ ಪ್ರಕರಣವನ್ನು ಮಾನ್ಯ ಕರ್ನಾಟಕ ಲೋಕಾಯುಕ್ತ ರವರಿಗೆ ವರ್ಗಾಯಿಸಲಾಗಿರುತ್ತದೆ. ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988, 17 (ಎ) ರ ಪ್ರಕಾರ ವರದಿಯಲ್ಲಿನ ಆಪಾದನೆಗಳ ಕುರಿತು ವಿಚಾರಣೆ/ತನಿಖೆ ಕೈಗೊಳ್ಳಲು ಪೂರ್ವಾನುಮತಿ ನೀಡುವಂತೆ ಪೋಲೀಸ್ ಮಹಾನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ರವರು ಕೆ.ಎಂ.ಎಫ್ ಅನ್ನು ಕೋರಿರುತ್ತಾರೆ. |

| | | |
|---|---|---|
| ಇ | ಜಾರಿ ನಿರ್ದೇಶನಾಲಯವು ನೇಮಕಾತಿ ಹಗರಣದ ಕುರಿತು ಸಮಗ್ರ ತನಿಖೆ ಮಾಡಿ ಅಗತ್ಯ ಸಾಕ್ಷಿಗಳನ್ನು ಒದಗಿಸಿದ್ದರೂ ಕೂಡ ತಪ್ಪಿತಸ್ಥರ ವಿರುದ್ಧ ಸರ್ಕಾರವು ದೂರು ದಾಖಲಿಸಿ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು; | ನೇಮಕಾತಿ ಹಗರಣದ ಕುರಿತು ಜಾರಿ ನಿರ್ದೇಶನಾಲಯದಿಂದ ಯಾವುದೇ ತನಿಖಾ ವರದಿಯು ಸ್ವೀಕೃತವಾಗಿರುವುದಿಲ್ಲ.<br>ಆದರೆ ಅರ್ಜಿದಾರರಾದ ಶ್ರೀ ಕೆ.ಸಿ.ರಾಜಣ್ಣ ರವರು ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದ ಮೇಲೆ ಪೊಲೀಸ್ ಮಹಾ ನಿರ್ದೇಶಕರು, ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988, 17 (ಎ) ರ ಪ್ರಕಾರ ವರದಿಯಲ್ಲಿನ ಆಪಾದನೆಗಳ ಕುರಿತು ಒಕ್ಕೂಟದ ಇಬ್ಬರು ಆಡಳಿತ ಮಂಡಳಿ ನಿರ್ದೇಶಕರ ವಿರುದ್ಧ ವಿಚಾರಣೆ/ತನಿಖೆ ಕೈಗೊಳ್ಳಲು ಪೂರ್ವಾನುಮತಿಯನ್ನು ನೀಡುವಂತೆ ಕೋರಿರುತ್ತಾರೆ.<br><br>ಸದರಿ ದೂರು ಅರ್ಜಿಯಲ್ಲಿ ನೇಮಕಾತಿ ಸಮಿತಿಯ ಸದಸ್ಯರುಗಳ ವಿರುದ್ಧ ಕ್ರಮ ಕೈಗೊಳ್ಳಲು ಅನುಮತಿ ನೀಡುವಂತೆ ಕೋರಿದ್ದು, ಸದರಿ ನೇಮಕಾತಿ ಸಮಿತಿಯಲ್ಲಿ ಚುನಾಯಿತ ಸದಸ್ಯರುಗಳು, ಅಧಿಕಾರೇತರ ಸದಸ್ಯರುಗಳು ಹಾಗೂ ಅಧಿಕಾರಿಗಳಿದ್ದು ಇವರುಗಳ ವಿರುದ್ಧ ವಿಚಾರಣೆಗೆ ಅನುಮತಿ ನೀಡುವ ವಿವಿಧ ಸಕ್ಷಮ ಪ್ರಾಧಿಕಾರಗಳಿದ್ದು ಸದರಿ ಅಂಶವು ಪರಿಶೀಲನಾ ಹಂತದಲ್ಲಿರುತ್ತದೆ. |
| ಈ | ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟದ ಮಂಡಳಿಯ ಅಧಿಕಾರಾವಧಿಯು ಮುಕ್ತಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಮುಕ್ತಾಯವಾದಲ್ಲಿ ಯಾವ ದಿನಾಂಕದಂದು ಮುಕ್ತಾಯವಾಗಿರುತ್ತದೆ; (ವಿವರವಾದ ಮಾಹಿತಿ ನೀಡುವುದು) | ಹೌದು.<br><br>ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಅವಧಿಯು ದಿನಾಂಕ:12.05.2024ಕ್ಕೆ ಮುಕ್ತಾಯವಾಗಿರುತ್ತದೆ. |
| ಉ | ಸದರಿ ಹಾಲು ಒಕ್ಕೂಟದ ಅವಧಿ ಮುಗಿದ ನಂತರ ಆಡಳಿತಾಧಿಕಾರಿಯವರನ್ನು ನೇಮಕ ಮಾಡಲಾಗಿರುತ್ತದೆಯೇ (ಮಾಡಿದ್ದರೆ ಮಾಹಿತಿ ನೀಡುವುದು) | ಇಲ್ಲ |
| ಊ | ಒಂದು ವೇಳೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡಿಲ್ಲದಿದ್ದಲ್ಲಿ ಯಾವ ಕಾರಣಕ್ಕಾಗಿ ಮಾಡಿರುವುದಿಲ್ಲ? (ಎಂಬ ವಿವರಣೆ ನೀಡುವುದು) | ಲೋಕಸಭಾ ಸಾರ್ವತ್ರಿಕ ಚುನಾವಣೆಯ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂ: ಸಿಒ/34/ಸಿಎಲ್ಎಂ/2024 (ಇ) ದಿ:21-03-2024 ರಲ್ಲಿ ಮಾರ್ಚ್, ಏಪ್ರಿಲ್ ಮತ್ತು ಮೇ-2024ರ ಮಾಹೆಗಳಲ್ಲಿ ಆಡಳಿತ ಮಂಡಳಿ ಅವಧಿ ಮುಕ್ತಾಯವಾಗುವ ಸಹಕಾರ ಸಂಘಗಳ ಚುನಾವಣೆಯನ್ನು ದಿನಾಂಕ:06-06.2024ರವರೆಗೆ ಮುಂದೂಡಲಾಗಿತ್ತು. |

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ:ಸಿಒ 34 ಸಿಎಲ್‌ಎಂ 2024, ದಿನಾಂಕ:05.06.2024ರಲ್ಲಿ ಚಾಲ್ತಿಯಲ್ಲಿರುವ ಆಡಳಿತ ಮಂಡಳಿಯೇ ಮುಂದುವರೆಯುವಂತೆ ಆದೇಶಿಸಿರುತ್ತದೆ.<br><br>ಈ ಸಂಬಂಧ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 17626/2024 ರಂತೆ ದಾವೆ ದಾಖಲಾಗಿ ದಿನಾಂಕ:11.07.2024 ರಂದು 90 ದಿನಗಳೊಳಗಾಗಿ ಒಕ್ಕೂಟದ ಚುನಾವಣೆಯನ್ನು ಪೂರ್ಣಗೊಳಿಸಲು ತೀರ್ಪು ನೀಡಲಾಗಿರುತ್ತದೆ. |

**ಸಂಖ್ಯೆ: ಸಿಒ 108 ಸಿಸಿಬಿ 2024**

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು